**1** ನೇ ಹೆಚ್ಚುವರಿ ವಿಶೇಷ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
ಚಿಕ್ಕಮಗಳೂರು

ಸ್ಪೆಷಲ್ ಮೊಕದ್ದಮೆ ನಂಃ 24/2022

| | | |
|---|---|---|
| ಸಾಕ್ಷಿದಾರರ ಹೆಸರು | - ಸಿದ್ದಾರ್ಥ | ಪಿಡಬ್ಲೂ - 06 |
| ತಂದೆಯ ಹೆಸರು | - ಮೋಹನ | ಸಿಡಬ್ಲೂ - 05 |
| ವಯಸ್ಸು | - 52 ವರ್ಷ | |
| ಉದ್ಯೋಗ | - ವ್ಯವಸಾಯ | |
| ವಾಸ ಸ್ಥಳ | - ಚಿಕ್ಕಮಗಳೂರು | |

ದಿನಾಂಕಃ 14.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

*(*ಆರೋಪಿಯು ನ್ಯಾಯಾಂಗ ಬಂದನದಲ್ಲಿದ್ದು*,* ಆತನನ್ನು ಈ ದಿನ ***Google meet*** ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ*.* ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಎಂದು ಖಾತ್ರಿಪಡಿಸಿಕೊಳ್ಳಲಾಯಿತು*.)*

ಮುಖ್ಯ ವಿಚಾರಣೆ **:** ವಿಶೇಷ ಸರ್ಕಾರಿ ಅಭಿಯೋಜಕರಿಂದ**-**

1. ಈ ದಿನ ವಿಡಿಯೋ ಕಾನ್ಸರೇನ್ಸಿಂಗ್ ಮೂಲಕ ಹಾಜರು ಪಡಿಸಿರುವ ಆರೋಪಿ ಮತ್ತು ಮೃತ ಶೇಷಪ್ಪ ಗೊತ್ತು. ಚಾಸಾ.15 ನನ್ನ ತಮ್ಮ. ಚಾಸಾ.4 ಮತ್ತು 6 ಗೊತ್ತು.

2. ಕಬ್ಬಿನಹಳ್ಳಿ ಗ್ರಾಮದಲ್ಲಿ ಚಾಸಾ.15 ರವರ ಕಾಫಿ ತೋಟ ಇದೆ. ಅದರಲ್ಲಿ ಕೂಲಿ ಕೆಲಸ ಮಾಡುವವರು ವಾಸಿಸಲು ಕೂಲಿ ಲೈನ್ ಮನೆಗಳು ಇವೆ. ಆರೋಪಿ ಮತ್ತು ಮೃತ ಶೇಷಪ್ಪರವರು ಚಾಸಾ.15

ರವರ ಕಾಫಿ ತೋಟದಲ್ಲಿ ಕೆಲಸ ಮಾಡಿಕೊಂಡು ಅವರ ಎಸ್ಟೇಟಿನಲ್ಲಿರುವ ಕೂಲಿ ಲೈನ್ ಮನೆಯಲ್ಲಿ ಒಟ್ಟಿಗೆ ವಾಸವಾಗಿದ್ದರು. ಸದರಿ ಕೂಲಿ ಲೈನ್ ಮನೆಯಲ್ಲಿ ಶೇಷಪ್ಪನ ಕೊಲೆಯಾಗಿತ್ತು. ಸದರಿ ವಿಚಾರ ನನಗೆ ಕೊಲೆಯಾದ ಮಾರನೆ ದಿನ ತಿಳಿಯಿತು.

3. ದಿಃ 19-11-2021 ರಂದು ಚಿಕ್ಕಮಗಳೂರು ಗ್ರಾಮಾಂತರ ಪೊಲೀಸರು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯ ಶವಗಾರಕ್ಕೆ ಬರುವಂತೆ ನನ್ನನ್ನು ಕರೆದಿದ್ದರು. ಅದರಂತೆ ಚಾಸಾ.4 ಮತ್ತು 6 ರವರನ್ನು ಸಹ ಅಲ್ಲಿಗೆ ಕರೆಸಿದ್ದರು. ಆ ಬಗ್ಗೆ ನಮಗೆ ಪೊಲೀಸರು ನೋಟೀಸನ್ನು ಕೊಟ್ಟಿದ್ದರು. ಸದರಿ ನೋಟೀಸನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನೋಟೀಸ್ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ನೋಟೀಸನ್ನು ನಿಪಿ.12 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.12(ಎ) ಎಂದು ಗುರುತಿಸಲಾಯಿತು. ಸದರಿ ಆಸ್ಪತ್ರೆಯ ಶವಗಾರದಲ್ಲಿ ಶೇಷಪ್ಪನ ಶವ ಇತ್ತು. ನಾವು ನೋಡಿದಾಗ ಆತನ ತಲೆ ಮತ್ತು ಹೊಟ್ಟೆಯ ಮೇಲೆ ಯಾವುದೋ ಆಯುಧದಿಂದ ಕಡಿದಂತಹ ಗಾಯಗಳು ಕಂಡುಬಂತು. ಶೇಷಪ್ಪನ ಕೊಲೆಯಾದ ಬಳಿಕ ಆರೋಪಿ ಕೂಲಿ ಲೈನಿನಲ್ಲಿ ಇರಲಿಲ್ಲ. ಹಾಗಾಗಿ ಆರೋಪಿಯೇ ಶೇಷಪ್ಪನನ್ನು ಕೊಲೆ ಮಾಡಿದ್ದಾನೆಂದು ನಾವು ಅಭಿಪ್ರಾಯ ಪಟ್ಟೆವು. ಆ ಬಗ್ಗೆ ಪೊಲೀಸರು ಮಧ್ಯಾಹ್ನ 12.15 ಗಂಟೆಯಿಂದ 2.30 ಗಂಟೆಯವರೆಗೆ ಶೇಷಪ್ಪನ ಶವ ತನಿಖೆಯನ್ನು ನಡೆಸಿ ಮಹಜರನ್ನು ಬರೆದುಕೊಂಡರು. ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಶವ ತನಿಖಾ ಪಂಚನಾಮೆ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಶವ ತನಿಖಾ

ಪಂಚನಾಮೆಯನ್ನು ನಿಪಿ.13 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.13(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗಾಗಲೇ ನಿಪಿ.9 ಮತ್ತು ಪಿ.10 ಎಂದು ಗುರುತಿಸಲ್ಪಟ್ಟಿರುವ ಫೋಟೋಗಳನ್ನು ತೋರಿಸಲಾಗಿ ಅವುಗಳಲ್ಲಿ ಶೇಷಪ್ಪನ ಶವ ಕಂಡುಬರುವುದಾಗಿ ನುಡಿದಿರುತ್ತಾರೆ. ಸದರಿ ಫೋಟೋಗಳಲ್ಲಿ ತನ್ನ, ಚಾಸಾ.4 ಮತ್ತು 6 ರವರ ಇರುವಿಕೆ ಕಂಡುಬರುವುದಾಗಿ ನುಡಿದಿರುತ್ತಾರೆ.

ಪಾಟೀ ಸವಾಲುಃ ಆರೋಪಿ ಪರ ವಕೀಲರು ಗೈರು ಹಾಜರಿದ್ದು ಆರೋಪಿ ಸಾಕ್ಷಿಯ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಓ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ